# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ.859/2015

ಪ್ರಮಾಣ ವಚನ ಬೋಧಿಸಲಾಯಿತು

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಲಕ್ಕೇಗೌಡ | | ಚಾಸಾ- 6 |
| **ತಂದೆಯ ಹೆಸರು** | ಃ ಬೋರೇಗೌಡ | | ಪ್ರಾಸಾ- 6 |
| **ವಯಸ್ಸು** | ಃ 62 ವರ್ಷ | | |
| **ಉದ್ಯೋಗ** | ಃ ವ್ಯವಸಾಯ | | |
| **ವಾಸ** | ಃ ಬಿ.ಹೊನ್ನೇನಹಳ್ಳಿ | | ದಿನಾಂಕಃ 19.06.2025 |

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೋಲಿಸ್ ರವರು ನಮ್ಮ ಗ್ರಾಮಕ್ಕೆ ಬಂದಿದ್ದು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದು, ಅದರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ಮಹಜರ್ ಗೆ ನನ್ನ ಜೊತೆ ಯಾರೆಲ್ಲಾ ಸಹಿ ಮಾಡಿದ್ದಾರೆ ಹಾಗೂ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**6** ಎಂದು ಹಾಗೂ ಸಹಿಯನ್ನು ನಿಪಿ-**6**(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ-**1** ರಿಂದ **3** ನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಡ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು**)**

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ದಿಃ **14.05.2014** ರಂದು ನನ್ನನ್ನು ಪೋಲಿಸ್ ರವರು ಕರೆದು, ಸದರಿ ಪ್ರಕರಣಕ್ಕೆ ಸಾಕ್ಷಿಯಾಗಿ ಸಹಿ ಮಾಡಿಬೇಕು ಎಂದು ಕೋರಿಕೆಯ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅ ಸಮಯದಲ್ಲಿ ಕೃತ್ಯಕ್ಕೆ ಬಳಿಸಿದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಚಾಸಾ-**1**ರವರ ಮನೆಯ

ಮುಂಭಾಗ ಸ್ಥಳ ಮಹಜರ್ ಜರುಗಿಸಿ ಹಂಚಿನ ಚೂರು ಮತ್ತು ಕಲ್ಲುಗಳನ್ನು ಅಮಾನತ್ತು ಪಡಿಸಿಕೊಂಡು ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ನಿಪಿ-6 ಮತ್ತು ಮುಮಾ-1 ರಿಂದ 3 ರ ಎಲ್ಲಾ ವಿಚಾಗಳು ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರಿಂದ:

ಏನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ :- ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ 19.06.2025